## ಸುಳ್ಳುಸ್ವಾಮಿ!

ಕ್ರಿಮಿನಲ್ ಪ್ರಕರಣವೊಂದರಲ್ಲಿ ಸಾಕ್ಷಿಗಳ ವಿಚಾರಣೆ ಮುಗಿದು ಸಿಆರ್‌ಪಿಸಿ ಸೆಕ್ಷನ್ 313 ಅನ್ವಯ ನ್ಯಾಯಾಧೀಶರು ಆರೋಪಿಯ ಹೇಳಿಕೆಯನ್ನು ದಾಖಲಿಸಿಕೊಳ್ಳಬೇಕಿತ್ತು. 'ನೋಡಪ್ಪಾ ನಿನ್ನ ವಿರುದ್ಧ ನ್ಯಾಯಾಲಯದಲ್ಲಿ ಹೇಳಲಾದ ಸಾಕ್ಷ್ಯದ ಸಾರಾಂಶವನ್ನು ನ್ಯಾಯಾಧೀಶರು ನಿನಗೆ ಓದಿ ಹೇಳ್ತಾರೆ.ಅವರು ಏನೇ ಹೇಳಿದರೂ ನೀನು 'ಸುಳ್ಳು ಸ್ವಾಮೀ' ಎಂದು ಉತ್ತರಿಸಬೇಕು' ಎಂದು ವಕೀಲರು ಆರೋಪಿಗೆ ಹೇಳಿಕೊಟ್ಟರು. ನ್ಯಾಯಾಧೀಶರು ಆರೋಪಿಯನ್ನು ಮುಂದೆ ಬರುವಂತೆ ಕರೆದು, 'ಏನಪ್ಪಾ ನಿನ್ನ ಹೆಸರು?' ಎಂದರು. ಆರೋಪಿ, 'ಸುಳ್ಳುಸ್ವಾಮೀ' ಎಂದ!

**ಪಿ.ಜೆ. ರಾಘವೇಂದ್ರ**



## ಮರ್ಯಾದೆ ಪ್ರಶ್ನೆ...

ತಂಗಿಯ ಮನೆಗೆ ಅವರ ಸ್ನೇಹಿತರೆಲ್ಲಾ ಊಟಕ್ಕೆ ಬರುವವರಿದ್ದರು. ಅವಳಿಗೆ ಸಹಾಯ ಮಾಡಲು ನಾನೂ ಹೋಗಿದ್ದೆ. ಯಾವಾಗಲೂ ಪಿಟಿಪಿಟಿ ಮಾತಾಡುತ್ತ ಚೂಟಿಯಾಗಿದ್ದ ತಂಗಿಯ ಮಗಳು ಆ ದಿನ ಒಂದೂ ಮಾತಾಡದೇ ಸುಮ್ಮನೇ ಕೂತಿದ್ದಳು. 'ಯಾಕೊ ನಮ್ಮ ಚೂಟಿ ಮೌನವಾಗಿದೆಯಲ್ಲ?' ಎಂದು ನಾನು ಎಷ್ಟು ಸಲ ಕೇಳಿದರೂ ಮಾತಾಡಲಿಲ್ಲ. ಮನೆಗೆ ಬಂದ ಅತಿಥಿಗಳೆದುರೂ ಅವಳು ಮಾತಾಡಲಿಲ್ಲ. ಅದೇ ಮೊದಲ ಬಾರಿಗೆ ಮನೆಗೆ ಬಂದಿದ್ದವರೊಬ್ಬರು, 'ಏನಮ್ಮಾ ನಿನ್ನ ಹೆಸರು?' ಎಂದರು. ಅವಳು ಉತ್ತರಿಸಲಿಲ್ಲ. 'ಅಂಕಲ್ ಹೆಸರು ಕೇಳ್ತಾ ಇದ್ದಾರೆ... ಹೇಳಬೇಕು ಅಲ್ವಾ? ಇಲ್ಲ ಅಂದ್ರೆ ನಿನ್ನ ಮೂಗಿ ಅಂದುಕೊಳ್ಳಲ್ವಾ ಅವರು?' ಎಂದೆ. 'ಅಯ್ಯೊ ಅಂದುಕೊಳ್ಳಲಿ ಬಿಡು ದೊಡ್ಡಮ್ಮ, ನಾನು ಬಾಯಿ ಬಿಟ್ಟರೆ ಅಮ್ಮ ಅಪ್ಪನ ಮರ್ಯಾದೆ ಹೋಗುತ್ತೆ' ಅಂದಳು. 'ಅದ್ಯಾಕೆ?' ಅಂತ ಕೇಳಿದಾಗ ಗೊತ್ತಾಯಿತು. 'ಬಂದವರೆದುರು ಬಾಯಿಗೆ ಬಂದದ್ದೇ ಮಾತಾಡಿ, ಮರ್ಯಾದೆ ಕಳೀತಿಯ. ಈ ಸಲ ಬಾಯಿ ಬಿಟ್ಟರೆ ನೋಡು' ಎಂದು ಗದರಿದ್ದರು.



ಕಲೆ: ಗಣೇಶ ಆಚಾರ್ಯ

**ಅನುಪಮಾ ಎಸ್.ವಿ.**